ಇಲಾಖೆಯು ಸೋಂಕು ನಿವಾರಣಾ ಕ್ರಮಗಳನ್ನು ತೆಗೆದುಕೊಳ್ಳುವುದು.

5. ಬೈವೊಲ್‌ಟೀನ್ ರೇಷ್ಮೆ ಬೆಳೆಗಾರರಿಗೆ ಹುಳು ಸಾಕಾಣಿ ಮನೆ ನಿರ್ಮಾಣಕ್ಕೆ ಸರ್ಕಾರ ಶೇ.25 ಭಾಗ ಸಹಾಯಧನ ಕೊಡುತ್ತಿದೆ. ಇದು ಅಲ್ಲದೆ ಪರಿಶಿಷ್ಟ ಜಾತಿ ರೇಷ್ಮೆ ಕೃಷಿಕರಿಗೆ ಹೊಸದಾಗಿ ರೇಷ್ಮೆ ವ್ಯವಸಾಯ ಕೈಗೊಳ್ಳಲು ಪ್ರೋತ್ಸಾಹ ಧನ ಕೊಡುವುದು. ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಿಸಲು ಶೇ.60 ರಷ್ಟು ಸಹಾಯ ಧನ ಕೊಡುವುದು. ರೇಷ್ಮೆ ಕೃಷಿಕರಿಗೆ ಹುಳು ಸಾಕಾಣಿಕೆ ಉಪಕರಣಗಳನ್ನು ಪುಕ್ಕಟೆ ಸರಬರಾಜು ಮಾಡುವುದು.

ದಾವಣಗೆರೆ ನಗರ ಸಭೆಯನ್ನು ಕಾರ್ಪೊರೇಷನ್ ಮಾಡುವ ಬಗ್ಗೆ

1530: ಶ್ರೀ ವೈ.ಎಂ. ವೀರಣ್ಣ (ದಾವಣಗೆರೆ):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ದಾವಣಗೆರೆ ನಗರಸಭೆಯನ್ನು ಕಾರ್ಪೊರೇಷನ್ನಾಗಿ ಮಾಡಲು ಹಿಂದಿನ ಅಧಿವೇಶನದಲ್ಲಿ ಭರವಸೆ ನೀಡಿದ್ದು, ಇದನ್ನು ಕಾರ್ಯರೂಪಕ್ಕೆ ತರಲು ಸರ್ಕಾರವು ಕೈಗೊಂಡ ಕ್ರಮವೇನು;

ಆ. ಹಾಗಿಲ್ಲದಿದ್ದಲ್ಲಿ, ಯಾವಾಗ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ. ಪರಿಶೀಲನೆಯಲ್ಲಿದೆ.

ಆ. ಮೇಲೆ (ಅ)ಗೆ ನೀಡಿರುವ ಉತ್ತರದ ಪ್ರಕಾರ ಇದು ಉದ್ಭವಿಸುವುದಿಲ್ಲ.

ದಾವಣಗೆರೆ ನಗರಸಭೆಯ ಈಜುಕೊಳವನ್ನು ಸುವ್ಯವಸ್ಥಿತಗೊಳಿಸುವ ಬಗ್ಗೆ

1531: ಶ್ರೀ ವೈ.ಎಂ. ವೀರಣ್ಣ (ದಾವಣಗೆರೆ):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ದಾವಣಗೆರೆ ನಗರಸಭೆಯ ವತಿಯಿಂದ 72ರಲ್ಲಿ ನಿರ್ಮಿತವಾದ ಈಜುಕೊಳವು ಆತ್ಯಾಧುನಿಕ ರೀತಿಯಿಂದ ಕೂಡಿದ್ದು ಈಗ ಸ್ಥಗಿತಗೊಂಡಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಆ. ಅಲ್ಲಿಯ ಜನರಿಗೆ ಈಜುಕೊಳದ ಅವಶ್ಯಕತೆ ಇರುವುದರಿಂದ ಸುವ್ಯವಸ್ಥಿತಗೊಳಿಸಿ ಕಾರ್ಯ ಆರಂಭಿಸಲು ಸರ್ಕಾರವು ಕ್ರಮಕೈಗೊಳ್ಳುವುದೇ;

ಇ. ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ. ಹೌದು.

ಆ. ನಗರಸಭೆ ದಾವಣಗೆರೆಯಿಂದ ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು.

ಇ. ಉದ್ಭವಿಸುವುದಿಲ್ಲ.

ದಾವಣಗೆರೆ ನಗರದಲ್ಲಿರುವ ರೈಲ್ವೆ ಗೇಟನ್ನು ಅಂಡರ್ ಬ್ರಿಡ್ಜ್ ಮಾಡುವ ಬಗ್ಗೆ

1537: ಶ್ರೀ ವೈ.ಎಂ. ವೀರಣ್ಣ (ದಾವಣಗೆರೆ):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?